ಇನ್ನು ಎರಡನೇ ಪ್ರಶ್ನೆ, ಏನೆಂದರೆ ಕೆಲವು ಮಾಸ್ಟರುಗಳು ಆ ಊರಿನಲ್ಲೇ ವಾಸ ಇರುವುದಿಲ್ಲ. ಅವರು ಟೌನ್‌ನಲ್ಲೋ ಅಥವಾ ಇನ್ನೆಲ್ಲೋ ವಾಸ ಇದ್ದುಕೊಂಡು ಇಲ್ಲಿಗೆ ಬರುತ್ತಾರೆ. ಆ ಸ್ಕೂಲಿಗೆ ಒಂದು ದಿವಸವೋ ಅಥವಾ ಎರಡು ದಿವಸವೋ ಬರುತ್ತಾರೆ. ಏನಾದರೂ ಕೇಳಿದರೆ ನಾನು ರಜಾ ತೆಗೆದು ಕೊಂಡಿದ್ದೇನೆ ಎಂದು ಹೇಳುತ್ತಾರೆ. ಆದುದರಿಂದ ಇವರಿಗೆ ಎಷ್ಟು ದಿವಸ ಸಿ. ಎಲ್. ಇದೆ ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ :—ಸರ್ಕಾರಿ ರೂಲ್ಸ್ ಪ್ರಕಾರ ಎಷ್ಟು ಸಿ. ಎಲ್ ಇದೆಯೋ ಅಷ್ಟು ಅವರಿಗೆ ಕೊಡಬೇಕಾಗುತ್ತದೆ. ಅವರು ಬರದೇ ಹೋದರೆ ಏನಾಗುತ್ತದೆ ಎಂಬುದನ್ನು ನಾನು ಈ ಮೊದಲೇ ಈ ಮನೆಯಲ್ಲಿ ಉತ್ತರಿಸಿದ್ದೇನೆ. ಆದ್ದರಿಂದ ಮತ್ತೆ ಎರಡನೇ ಪ್ರಶ್ನೆಗೆ ನಾನು ಉತ್ತರ ಹೇಳಬೇಕಾದ ಅಗತ್ಯ ಇಲ್ಲ ಎಂದು ಹೇಳುತ್ತೇನೆ.

State Highway between Sankeshwar-Hukkeri Bridges

249 SRI S. MALHARGOUDA PATIL (Sankeshwar)—Will the Minister for Public Works be pleased to state :—

(a) whether plan and estimates have been prepared for conversion of small dips between Sankeshwar-Hukkeri State Highway channels into bridges ;

(b) the steps being taken by the Government to complete the same ?

SRI S. BANGARAPPA (Minister for Public Works)—

(a) No

(b) These works will be taken depending on the financial condition.

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ಸ್ವಾಮಿ ಈ ಒಂದು ರಸ್ತೆ ತಾಲ್ಲೂಕು ಕಛೇರಿಗೂ ಮತ್ತು ರೈಲ್ವೆ ಲೈನಿಗೂ ಹೋಗತಕ್ಕಂಥಾ ಒಂದು ಮುಖ್ಯ ರಸ್ತೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಎಸ್. ಬಂಗಾರಪ್ಪ.—ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ಸ್ವಾಮಿ, ಈ ವರ್ಷದ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಒಟ್ಟು ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ನನಗೆ ಕರಾರು ವಾಕ್ಕಾಗಿ ಗೊತ್ತಿಲ್ಲ. ಈ ಬಗ್ಗೆ ಒಂದು ನಕ್ಷೆ ಮತ್ತು ಅಂದಾಜನ್ನು ಇನ್ನೂ ಸಿದ್ಧ ಮಾಡಿಲ್ಲಾ. ಕಮರ್ ನೂರ್ ನಾಲಾ ವತ್ತು ಬಾವಾಪೂರ್ ನಾಲಾ ಈ ಎರಡರ ಬಗ್ಗೆಯೂ ಡಿಟೇಲ್ ಸರ್ವೆ ನಡೆಸಿ ಅವರ ಒಂದು ನಕ್ಷೆ ಮತ್ತು ಅಂದಾಜನ್ನು ತಯಾರು ಮಾಡಿ ತರಿಸುತ್ತೇವೆ. ಮೊದಲು ಅದನ್ನು ಸರ್ವೆ ಮಾಡಿಸುತ್ತೇವೆ. ನಂತರ ಅದರ ಒಂದು ಅಂದಾಜು ನೋಡಿ ಅದಕ್ಕೆ ಎಷ್ಟು ವೆಚ್ಚ ಮಾಡಬೇಕಾಗುತ್ತದೆ. ಅನ್ನುವುದನ್ನು ತಿಳಿದು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಿಸಬೇಕಾಗುತ್ತದೆ.

Construction of a new Tank at Nilogal Village in Yelburga Taluk

277 SHRI L. S. DESAI (Yelburga).— Will the Minister for Minor Irrigation be pleased to state :—

(a) whether it is a fact that Government accorded sanction for construction of New Tank at Nilogal village, Yelburga Taluk, Raichur District;

(b) whether it is a fact that construction work of this tank has not been taken up so far;

(c) if so, the reasons ?

SRI D. B. CHANDRE GOWDA (Minister for Minor Irrigation).—

(a) No.
(b) Yes
(c) The Plans and Estimates are under Scrutiny.

ಶ್ರೀ ಎಲ್. ಎಸ್. ದೇಸಾಯಿ.—ರಾಯಚೂರು ಜಿಲ್ಲೆ ಯಲಬುರ್ಗ ತಾಲ್ಲೂಕಿನ ೩೬ ಗ್ರಾಮಗಳು ಕೂಡ ಒಳ ಬೇಸಾಯಕ್ಕೆ ಸೇರಿರತಕ್ಕಂಥಾ ಪ್ರದೇಶವಾಗಿದೆ. ಈಗಾಗಲೇ ಅಲ್ಲಿನ ಜನರಿಗೆ ಒಂದು ಭೀಕರತೆ ಮತ್ತು ನಿರುದ್ಯೋಗ ಸಮಸ್ಯೆ ಉಂಟಾಗಿದೆ. ಈ ಬಗ್ಗೆ ಈಗಾಗಲೇ ಅಲ್ಲಿನ ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೂ ಸಹ ತಿಳಿಸಲಾಗಿದೆ. ಆದುದರಿಂದ ಈ ವರ್ಷದಲ್ಲಾದರೂ ಕೂಡ ಇದರ ಬಗ್ಗೆ ಕೆಲಸಗಳನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದರೆ ಆದಕ್ಕೆ ಇಲ್ಲ ಎಂದು ನನ್ನ ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಹೇಳಿದ್ದೀರಿ. ಈ ಪ್ರಶ್ನೆ ಬಹಳ ನಿರಾಶಾದಾಯಕ ವಾದಂಥಾ ಪ್ರಶ್ನೆ ಎಂದು ಭಾವಿಸಬೇಡಿ. ಈ ವರ್ಷದ ಬಜೆಟ್ಟಿನಲ್ಲಿ ಕನಿಷ್ಠಪಕ್ಷ ೮೭ ಗ್ರಾಮಗಳನ್ನಾದರೂ ಸೇರಿಸಿ ಅಲ್ಲಿಯ ಜನರಿಗೆ ಅನುಕೂಲ ಮಾಡಿಕೊಡಿ ಎಂದು ಕೇಳುತ್ತೇನೆ. ಆ ಗ್ರಾಮಗಳು ಒಣ ಬೇಸಾಯವಾಗಿರತಕ್ಕಂಥಾ ಪ್ರದೇಶವಾಗಿದೆ ಮತ್ತು ಕೆಂಪು ಮಣ್ಣು ಇರತಕ್ಕಂಥಾ ಪ್ರದೇಶವಾಗಿದೆ. ಈ ಒಂದು ದುಃಸ್ಥಿತಿಯಲ್ಲಿ ಆ ಗ್ರಾಮಗಳು ಇರುವುದರಿಂದ ಅಲ್ಲಿಗೆ ಒಂದು ಕೆರೆಯನ್ನು ಮಂಜೂರು ಮಾಡಿಕೊಟ್ಟು ಅಲ್ಲಿನ ನಿರುದ್ಯೋಗ ಒಕ್ಕಲಿಗನಿಗೆ ಅನುಕೂಲವಾಗುವಂತೆ ಈ ಕೆಲಸವನ್ನು ಮಾಡಿ ಕೊಡಬೇಕೆಂದು ನಾನು ಕೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ನಾನು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿರುವುದನ್ನು ತಾವು ತಪ್ಪು ಅರ್ಥ ಮಾಡಿಕೊಂಡಿದ್ದೀರಿ. ಅದು ಬಜೆಟ್ ಕೆಲಸ ಆದಕ್ಕೆ ೧೦ ಲಕ್ಷ ೩೪ ಸಾವಿರ ರೂಪಾಯಿ ಅಂದಾಜು ಮಾಡಿದ್ದೇವೆ ಮತ್ತು ಆ ಬಗ್ಗೆ ಪ್ಲಾನ್ಸ್ ಕೂಡ ತಯಾರಾಗಿವೆ. ಅಲ್ಲಿಂದ ತಾಂತ್ರಿಕ ನಕ್ಷೆ ಮತ್ತು ಎಸ್ಟಿಮೇಟ್ ಬರಲು ತಡವಾಗಿದ್ದುದರಿಂದ ಆ ಕೆಲಸ ಆರ್ಥಕ್ಕೆ ಆಗಿತ್ತು. ಅಲ್ಲಿಂದ ಒಂದು ಪರಿಸ್ಥಿತಿಯನ್ನು ಮನಗಂಡೇ ಇದನ್ನು ಈ ಬಜೆಟೆಡ್ ವರ್ಕ್ಸ್‌ನಲ್ಲಿ ಸೇರಿಸಲಾಗಿದೆ.

Vented dam across Erpakariya River in Karkal Taluk.

330 SRI DAMODAR MULKY, (Moodabidri).—Will the Minister for Minor Irrigation be pleased to state;—

(a) when was a vented dam constructed across Erpakariya river at Mukkadappa of Kadandale village Karkal Taluk, South Kanara District;

(b) when a portion of the dam was washed away;

(c) what was the cost of the dam;

(d) what is the total acreage of land this dam was supplying water;

(e) whether the water cess is being levied ?

SRI D. B. CHANDREGOWDA (Minister for Minor Irrigation)—

(a) The Official nomenclature of this vented dam is "Vented dam across Kalmadi and Kuradi river" (Kallamundkur river) in Kadandale village in Karkal Taluk.